# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.46/2012

**DW**: 1

**ದಿನಾಂಕ 21.01.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಬಿ.ಬಿ.ಕೆ. ವಕೀಲರಿಂದ:**

ನಾವು 3 ಜನ ಅಣ್ಣ ತಮ್ಮಂದಿರು. ಸದರಿ ನಾವು 3 ಜನ ಸಹೋದರರ ಪೈಕಿ ನನ್ನ ಅಣ್ಣ ಮಹಾದೇವ ಇವರು ಮರಣ ಹೊಂದಿರುತ್ತಾರೆ. ವಾದಿಯು ಮಹಾದೇವ ಇವರ ಹೆಂಡತಿ ಎಂದರೆ ಸರಿಯಲ್ಲ. ಸದರಿ ಮಹಾದೇವ ಇವರಿಗೆ ಮದುವೆಯಾಗಿರಲಿಲ್ಲ. ಸದರಿ ವಾದಿಯು ತಹಶೀಲ್ದಾರ ಕಚೇರಿಯಲ್ಲಿ ತನ್ನ ಗಂಡನ ಆಸ್ತಿಗೆ ತನ್ನ ಹೆಸರನ್ನು ದಾಖಲು ಮಾಡುವಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವಾ ಆಸ್ತಿ ಸರ್ವೆ ನಂ.457/2 ನ್ನು ನನ್ನ ತಂದೆ ತಾಯಿಯು ವಾರಸಾ ಮಾಡಿಕೊಂಡಿರುತ್ತಾರೆ ಆದರೆ ವಾದಿಗೆ ಆಸ್ತಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.  ಸರ್ವೆ ನಂ.457 ಇದು 4 ಹಿಸ್ಸಾಗಳಾಗಿರುತ್ತದೆ. ಸರ್ವೆ ನಂ.457/1 ಇದು 4 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.457/2 ಇದು ನನ್ನ ಹೆಸರಿನಲ್ಲಿ ಇರುತ್ತದೆ.  ಸರ್ವೆ ನಂ.233 ಇದು ನಮ್ಮ ತಂದೆ ಮರಣಾ ನಂತರ ವಾರಸಾ ಮುಖಾಂತರ ನಮ್ಮ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನಮ್ಮ ತಂದೆಯವರು ಜೀವಂತವಾಗಿದ್ದಾಗಲೇ ದಾವಾ ಸರ್ವೆ ನಂ.457 ರಲ್ಲಿ 4 ಭಾಗ ಮಾಡಿದ್ದರು ಎಂದರೆ ಸರಿ. ಆ ಪ್ರಕಾರ ಸರ್ವೆ ನಂ.457/2 ನನ್ನ ಅಣ್ಣ ಮಹಾದೇವ ಇವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನನ್ನ ಅಣ್ಣ ಮಹಾದೇವ ಇವರು ದಿಃ25.11.2011 ರಂದು ಮರಣ ಹೊಂದಿರುತ್ತಾರೆ. ನಿಮ್ಮ ಅಣ್ಣ ಮಹಾದೇವ ಇವರು ತೀರಿಕೊಂಡ ನಂತರ ವಾದಿಯು ನಿಮ್ಮ ಮನೆಯಲ್ಲಿ ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ವಾದಿಯು ಯಾರು ಎಂದು ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾವು ವಾದಿಯ ಹೆಸರಿಗೆ ವಾರಸಾ ಮಾಡಿಕೊಡದೇ ಆಕೆಯನ್ನು ಮನೆಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾವು ವಾದಿಯನ್ನು ಹೊರಗೆ ಹಾಕಿದ್ದರಿಂದ ಆಕೆಯು ತನ್ನ ಗಂಡನ ಹಿಸ್ಸೆಯನ್ನು ಕೋರಿ ಈ ದಾವೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

-2-

ನಾನು ದಾವೆಗೆ ತಕರಾರು ಸಲ್ಲಿಸಿಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜನ ಹೆಸರಿನಲ್ಲಿ ಮೊದಲು ಇದ್ದವು ಎಂದರೆ ಸರಿ. ಕಾನೂನುಬದ್ಧವಾಗಿ ವಾದಿಗೆ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ಆಕೆ ಯಾರು ಎಂದು ನನಗೆ ಗೊತ್ತಿರುವುದಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ನನ್ನ ಸಾಕ್ಷ್ಯಾಪ್ರಮಾಣ ಪತ್ರಿಕೆಗೆ ಮಾಹಿತಿ ನೀಡಿರುತ್ತೇನೆ ಮತ್ತು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ. ನಾನು ಉದ್ದೇಶಪೂರ್ವಕವಾಗಿ ಆಕೆಗೆ ಪಾಲನ್ನು ಕೊಡಬಾರದು ಎನ್ನುವ ದುರುದ್ದೇಶದಿಂದ ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.